ಹೊಟ್ಟೆಯನ್ನು ಸೇರಿಕೊಂಡಿತ್ತು. ಈ ಸಂಗತಿಯನ್ನೆಲ್ಲಾ ರೈತ ಹೇಳಿದ ಮೇಲೆ ಶಿವ ಹೋಗಿ ಊರಿನ ಯಜಮಾನನ ಬಳಿ ಮಾತನಾಡಿ, ಅವನಿಗೆ ಹಣ ಕೊಟ್ಟು ಅವನಿಂದ ಆ ರೈತನ ಜಮೀನನ್ನು ಬಿಡಿಸಿಕೊಂಡು ಬಂದನು. ಜಾತ್ರೆಗೆ ಹೋಗಿ ಒಂದು ಜೊತೆ ಎತ್ತುಗಳನ್ನು ಕೊಂಡು ತಂದುಕೊಟ್ಟನು. ಮನೆಗೆ ಬೇಕಾಗುವಷ್ಟು ದವಸ ಧಾನ್ಯವನ್ನು ಅಂಗಡಿಯಿಂದ ತಂದುಕೊಟ್ಟನು. ಮನೆಗೆ, ಹಾಲು ಮೊಸರಿಗೆ ಅಂತ ಒಂದು ಕರಾವಿನ ಹಸುವನ್ನು ಕೊಂಡುತಂದನು. ಆ ಬಾಲಕನನ್ನು ಶಾಲೆಗೆ ಮತ್ತೆ ಸೇರಿಸಿ ಅವನು ಶಾಲೆಗೆ ಹೋಗುವಂತೆ ವ್ಯವಸ್ಥೆ ಮಾಡಿದನು. ಮನೆ ಖರ್ಚಿಗೆ ವೃದ್ಧೆಯ ಕೈಗೆ ಸ್ವಲ್ಪ ಹಣ ನೀಡಿದನು. ರೈತನಿಗೆ ಕೃಷಿಯ ಖರ್ಚಿಗೆ ಅಂತ ಅವನು ಬೇಡ ಅಂದರೂ ಸ್ವಲ್ಪ ಹಣ ನೀಡಿದನು.

ಬೇಸಿಗೆ ಮುಗಿಯುತ್ತಿದ್ದಂತೆಯೇ ಆಕಾಶದಲ್ಲಿ ಮುಂಗಾರಿನ ಮೋಡಗಳು ಹೆಪ್ಪುಗಟ್ಟತೊಡಗಿದ್ದವು. ರೈತರು ಮೋಡ, ಹೊತ್ತಿನ ಕಣ್ಣಿನ ಮಿಂಚು, ಧಗೆಯನ್ನು ಕಂಡು ಈ ಸಾರಿ ಮಳೆ ಬಂದೇ ಬರುತ್ತೆ ಎಂದು ಭರವಸೆ ತಾಳಿದರು. ರೈತರ ಆಸೆಯಂತೆ ಮಳೆ ಶುರುವಾಗಿಯೇ ಬಿಟ್ಟಿತು. ಆ ವೃದ್ಧನೂ ತನ್ನ ಹೊಲಕ್ಕೆ ಆರುಕಟ್ಟಲು ಮೂಲೆಯಲ್ಲಿಟ್ಟಿದ್ದ ನೇಗಿಲು ನೊಗವನ್ನು ಸಿದ್ಧಪಡಿಸಿಕೊಳ್ಳತೊಡಗಿದನು. ಇಷ್ಟಾದ ಮೇಲೆ ಶಿವನಿಗೆ ಕಾಶಿಗೆ ಹೋಗಲಿಕ್ಕೆ ತಾನು ತಂದಿದ್ದ ಹಣದಲ್ಲಿ ತನ್ನ ಬಳಿ ಸ್ವಲ್ಪವೂ ಉಳಿದಿರಲಿಲ್ಲ. ಕೊನೆಗೆ ಆತ ತನ್ನ ಊರಿಗೆ ಮರಳುವುದೇ ಸರಿಯಾದ ಮಾರ್ಗ ಎಂದು ನಿರ್ಧರಿಸಿದನು.

ನಾನು ಕಾಶಿಗೆ ಹೋಗದಿದ್ದರೆ ಏನಂತೆ? ನನ್ನ ಪರವಾಗಿ ನನ್ನ ಗೆಳೆಯ ರಾಮ ಹೋಗಿದ್ದಾನೆ. ಅವನು ದರ್ಶನ ಪಡೆದು ಬರಲಿ. ಆದರೆ ಈ ಬಡ ಕುಟುಂಬದ ನೆರವಿಗೆ ಅಂತ ಕಾಶಿ ವಿಶ್ವನಾಥನೇ ನನ್ನನ್ನು ಅವನ ದರ್ಶನಕ್ಕೆ ಬರುವುದನ್ನು ತಡೆದಿರಬೇಕು. ಇರಲಿ ಎಂದುಕೊಂಡು ತನ್ನ ಮನಸ್ಸಿಗೆ ತಾನೇ ಸಮಾಧಾನ ತಂದುಕೊಂಡು ಶಿವ ತನ್ನೂರಿಗೆ ಮರಳಿದನು.

ಊರಿಗೆ ಮರಳಿಬಂದ ಶಿವನನ್ನು ಅವನ ಮನೆಯವರು ಕಂಡು ಸಂತಸಪಟ್ಟರು. ಆದರೆ ಮನೆಯವರಿಗೆ ಸುಳ್ಳನ್ನು ಹೇಳಲು ಮನಸ್ಸು ಬಾರದೆ ಆತ ಮನೆಯವರಿಗೆ, 'ನಾನು ಕಾಶಿಗೆ ಹೋಗಿ ಬರಲು ಆಗಲಿಲ್ಲ. ದೇವರ ಇಚ್ಛೆ ಇರಲಿಲ್ಲ ಅನ್ನಿಸತ್ತೆ. ನಾನು ದಾರಿಯಲ್ಲಿ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡೆ. ಆಗ ನನ್ನ ಸ್ನೇಹಿತ ರಾಮನಿಂದ ಹಿಂದೆ ಬಿದ್ದೆ. ಆತ ಮುಂದೆ ಮುಂದೆ ಹೋದ. ಆ ಕಾಶಿ ವಿಶ್ವನಾಥನ ಹೆಸರಿನಲ್ಲಿ ನನ್ನ ತಪ್ಪನ್ನು ಕ್ಷಮಿಸಿ ಬಿಡಿ' ಎಂದು ಮನೆಯವರಿಗೆ ಹೇಳಿ ಸಮಾಧಾನಗೊಳಿಸಿದನು. ತಾನು ಇಲ್ಲದಿದ್ದಾಗ ಮನೆಯ ಕೆಲಸಗಳನ್ನೆಲ್ಲಾ ತನ್ನ ಮಗ ಅಚ್ಚುಕಟ್ಟಾಗಿ ನಿರ್ವಹಿಸಿದ್ದನ್ನು ಕಂಡು ಶಿವ ಸಂತಸಪಟ್ಟನು.

3

ಅತ್ತ ನೀರು ಕುಡಿದು ಬರಲು ಹೋದ ಶಿವನನ್ನು ಇತ್ತ ರಾಮ ಕಾದು ಕಾದು ಆತ ಬಾರದೆ ಇದ್ದಾಗ, 'ಬರ್‍ತಾನೆ, ಮುಂದೆ ಹೋಗ್ತಾ ಇರಾನ' ಎಂದುಕೊಳ್ಳುತ್ತಾ ತನ್ನ ಕಾಶಿಯಾತ್ರೆಯ ಪಯಣವನ್ನು ಮುಂದುವರಿಸಿ ಬಹುದೂರ ಬಂದುಬಿಟ್ಟಿದ್ದನು. ಆತ ದಾರಿಯಲ್ಲಿ ಸಿಗುತ್ತಿದ್ದ ಕಾಶಿಯಾತ್ರೆಯ ಯಾತ್ರಿಕರನ್ನೆಲ್ಲಾ 'ನಿಮಗೆ ಒಬ್ಬ ಮನುಷ್ಯ ಸಿಕ್ಕಿದ್ನಾ! ತಲೆಯಲ್ಲಿ ಕೂದಲು ಇಲ್ಲದ ಬೋಳು ತಲೆಯ ಮನುಷ್ಯ. ಅವನ ಹೆಸರು ಶಿವಾ ಅಂತ. ಅವನು ಕಂಡರೆ ನನಗೆ ತಿಳಿಸಿ' ಎಂದು ವಿನಂತಿಸಿಕೊಳ್ಳುತ್ತಿದ್ದನು. ಆದರೆ ಶಿವನನ್ನು ಕಂಡೆ ಎಂದ ಯಾತ್ರಿಕರು ಯಾರೂ ರಾಮನಿಗೆ ಸಿಗಲಿಲ್ಲ. ಆದರೆ ಯಾತ್ರಿಕರಲ್ಲಿ ಎಂತೆಂಥ ಹುಚ್ಚರು ಭೇಟಿಯಾಗುತ್ತಾರೆಂಬುದು ರಾಮನಿಗೆ ಗೊತ್ತಿರಲಿಲ್ಲ. ಅವನಿಗೆ ಒಬ್ಬ ಮನುಷ್ಯ ಸಂತನ ವೇಷದಲ್ಲಿ ದಾರಿಯಲ್ಲಿ ಬೆನ್ನು ಬಿದ್ದ. ತಾನು ಕಾಶಿಗೆ ಹತ್ತಾರು ಬಾರಿ ಹೋಗಿ ಬಂದಿರುವುದಾಗಿ ಹೇಳುತ್ತಲೇ ಕಾಶಿಪಟ್ಟಣ, ಕಾಶಿವಿಶ್ವನಾಥ, ಗಂಗಾನದಿ, ಗಂಗಾನದಿಯ ದಡದಲ್ಲಿರುವ ಹತ್ತಾರು ಹೆಣ ಸುಡುವ ಘಾಟುಗಳನ್ನು ರಾಮನ ಕಣ್ಣು ಮುಂದೆ ಕಟ್ಟುವಂತೆ ಬಣ್ಣಿಸಿದ. ರಾಮನಿಗೆ ಅದನ್ನೆಲ್ಲಾ ತೋರಿಸುವುದಾಗಿ ಹೇಳಿದ. ರಾಮ ಅವನ ಮಾತನ್ನು ಪೂರ್ಣವಾಗಿ ನಂಬಿ, ತನ್ನ ಬಳಿಯಿದ್ದ ಹಣದಲ್ಲಿ ಅವನ ದಾರಿ ಖರ್ಚಿಗೂ ಖರ್ಚು ಮಾಡಿದನು. ಆದರೆ ಆತ ಮಾತ್ರ ಒಂದು ರೂಪಾಯಿಯನ್ನೂ ಖರ್ಚು ಮಾಡುತ್ತಿರಲಿಲ್ಲ. ಅಂತೂ ಇಬ್ಬರೂ ಪ್ರಯಾಣ ಮಾಡಿ ಕಾಶಿ ಪಟ್ಟಣಕ್ಕೆ ಸೇರಿದ್ದರು. ಆದರೆ ಪಟ್ಟಣ ತಲುಪಿದ ಕೂಡಲೇ ಆ ಜನಸಂದಣಿಯಲ್ಲಿ ಆ ಮನುಷ್ಯ ಮಾಯವಾಗಿದ್ದ. ಆಗ ರಾಮನಿಗೆ ಅವನೇ ತನ್ನ ಓಡಿಹೋಗಿದ್ದ ಮಗನೇ ಯಾಕಾಗಿರಬಾರದು! ತಾನೇಕೆ ಸರಿಯಾಗಿ ಅವನನ್ನು ಗುರುತಿಸಲಿಲ್ಲ! ಎಂದು ಪಶ್ಚಾತ್ತಾಪ ಪಟ್ಟು ಮತ್ತೆ